ಓ.ಎಸ್. ನಂ. 129/2022
ಪಿ. ಡಬ್ಲ್ಯೂ-1

<u>ದಿನಾಂಕಃ **17-08 -2024**</u>

ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲುಃ **3** ರಿಂದ **5** ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್ ಬಿ ಪಿ ರವರಿಂದ.

ನಾನು ಶಾಲೆಯನ್ನು ಕಲಿತಿರುವುದಿಲ್ಲ. ನನ್ನ ಅಕ್ಕಳಾದ 1 ನೇ ವಾದಿಯು ಸಹ ಶಾಲೆಯನ್ನು ಕಲಿತಿರುವುದಿಲ್ಲ. ಅದೇ ರೀತಿ ನನ್ನ ತಮ್ಮಂದಿಯವರು ಶಾಲೆಯನ್ನು ಕಲಿತಿರುತ್ತಾರೆ. ನನ್ನ ತಮ್ಮಂದಿರು ಎಲ್ಲಿಯ ವರೆಗೆ ಓದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪನಾಗಬೇಕು. ಕಳೆದ 4-5 ವರ್ಷಗಳ ಹಿಂದೆ 2 ನೇ ಪ್ರತಿವಾದಿಯು ಮೃತಪಟ್ಟಿರುತ್ತಾರೆ. 2 ನೇ ಪ್ರತಿವಾದಿಯ ಹೆಂಡತಿಯು ಮೃತಪಟ್ಟು 2 ವರ್ಷಗಳು ಆಗಿರುತ್ತವೆ. 2 ನೇ ಪ್ರತಿವಾದಿಗೆ ಯಾವುದೇ ಮಕ್ಕಳು ಜನಿಸಿರುವುದಿಲ್ಲ. 2 ನೇ ಪ್ರತಿವಾದಿಯ ಹೆಂಡತಿ ಮಾತ್ರ ವಾರಸುದಾರಳು ಇದ್ದರು ಎಂದರೆ ಸರಿ

ದಾವೆಯನ್ನು ದಾಖಲಿಸಿದ ಬಗ್ಗೆ ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಯ ಸರ್ವೆ ನಂಃ 601 ಇರುತ್ತದೆ. ಸರ್ವೆ ನಂ 601 ರಲ್ಲಿ 9 ಎಕರೆಕ್ಕಿಂತ ಹೆಚ್ಚಿಗೆ ಜಮೀನು ಇರುತ್ತದೆ. ಈ ದಾವೆಯನ್ನು ದಾಖಲಿಸುವಾಗ ಸರ್ವೆ ನಂಬರ 601 ರಲ್ಲಿರುವ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇತ್ತು ಸಾಕ್ಷಿ ಮುಂದುವರೆದು ಇಬ್ಬರ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ಯಾವ ಪಹಣಿಯನ್ನು ನೋಡಿರುತ್ತೀರಿ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಮೊದಲು ನನ್ನ ತಾತನ ಹೆಸರಿನಲ್ಲಿ ಇತ್ತು ಅವರು ತೀರಿಕೊಂಡ ನಂತರ ಇಬ್ಬರ ಹೆಸರಿನಲ್ಲಿ ದಾಖಲು ಆಗಿರುತ್ತದೆ ಎಂದು ಹೇಳುತ್ತಾರೆ. ನೀವು ಯಾವ ವರ್ಷದ ಪಹಣಿಯನ್ನು ನೋಡಿ ಇಬ್ಬರ ಹೆಸರಿನಲ್ಲಿ ದಾಖಲಾಗಿತ್ತು ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ 601 ರಲ್ಲಿ 9 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸರಿ. ದಿನಾಂಕಃ

27.08.2001 ರಂದು 1 ಮತ್ತು 2 ನೇ ಪ್ರತಿವಾದಿಯರು 4 ಎಕರೆ 10 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಇಲ್ಲಿಯ ವರೆಗೂ ಸಹ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುರವೆದು ನನಗೆ ಗೊತ್ತಾದ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಯಾವ ದಿನಾಂಕ, ತಿಂಗಳ ಮತ್ತು ವರ್ಷದಂದು ಗೊತ್ತಾಯಿತು ಎಂದರೆ ಸಾಕ್ಷಿಯು 2016 ರಲ್ಲಿ ಗೊತ್ತಾಯಿತು ಆದರೆ ನನಗೆ ದಿನಾಂಕ, ತಿಂಗಳ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 2016 ರಲ್ಲಿ ಅವಾಗ ಯಾವ ಕಾಲ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಜಮೀನನ್ನು ಮಾರಾಟ ಮಾಡಿದ ನಂತರ ದಿನಾಂಕಃ 25.02.2002 ರಂದು 3 ನೇ ಪ್ರತಿವಾದಿಯ ಹೆಸರಿಗೆ 4 ಎಕರೆ 10 ಗುಂಟೆ ಜಮೀನು ಪಟ್ಟಾ ವರ್ಗಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ಪ್ರಕಾರ 4 ಎಕರೆ 10 ಗುಂಟೆ ಜಮೀನಿನ ಪಹಣಿ ಪತ್ರಿಕೆಯಲ್ಲಿ 3 ನೇ ಪ್ರತಿವಾದಿಯ ಹೆಸರು ಬಂದಿರುತ್ತದೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಸಾಕ್ಷಿಯು ಮುಂದುವರೆದು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 4 ಎಕರೆ 10 ಗುಂಟೆ ಜಮೀನು 3 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆದ ನಂತರ 38 ಗುಂಟೆ ಜಮೀನನ್ನು ಗುರುನಾಥರೆಡ್ಡಿ ರವರಿಗೆ 3 ನೇ ಪ್ರತಿವಾದಿಯು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 38 ಗುಂಟೆ ಜಮೀನು ಖರೀದಿ ಆದ ನಂತರ ಗುರುನಾಥರೆಡ್ಡಿ ರವರು ಅಸಲು ದಾವಾ ನಂಬರ 40/2016 ನೇದ್ದನ್ನು 3 ನೇ ಪ್ರತಿವಾದಿಯ ವಿರುದ್ಧ ದಾಖಲಿಸಿರುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅಸಲು ದಾವಾ ನಂಃ 40/2016 ನೇದ್ದರಲ್ಲಿ ದಿನಾಂಕಃ 13.02.2016 ರಂದು ಗುರುನಾಥರೆಡ್ಡಿ ಹಾಗೂ 3 ನೇ ಪ್ರತಿವಾದಿ ಕೂಡಿ ರಾಜೀ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಸಮ್ಮನೆ ಇರುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 38 ಗುಂಟೆ ಜಮೀನಿನಲ್ಲಿ ಗುರುನಾಥರೆಡ್ಡಿರವರು ನಿವೇಶನಗಳನ್ನು ತಯಾರಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.

4 ಎಕರೆ 10 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯು ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಲು ಸುಮಾರು 92 ಸಾವಿರ 700 ರೂಪಾಯಿ ಭರಣೆ ಮಾಡಿದ್ದರು ಎಂದರೆ ಸರಿಯಲ್ಲ. ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿದ್ದನ್ನು ಹಾಗೂ ಹಣವನ್ನು ತುಂಬಿದ ಬಗ್ಗೆ ನೀವು ಇಲ್ಲಿಯು ಸಹ ಇಲ್ಲಿಯ ವರೆಗೆ ಪ್ರಶ್ನೇಸಿರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ನಿವೇಶಗಳನ್ನು ಮಾಡಿ ಬೇರೆ ಜನರಿಗೆ ಅವುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು 1 ಎಕರೆ ಜಮೀನನ್ನು 4 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಇರುತ್ತದೆ ಮತ್ತು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು 1 ಎಕರೆ ಜಮೀನನ್ನು 5 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. 1 ಎಕರೆ ಜಮೀನಿನಲ್ಲಿ 4 ನೇ ಪ್ರತಿವಾದಿಯು ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿ ಅವುಗಳಲ್ಲಿ ಇದ್ದ ನಿವೇಶಗಳನ್ನು ಬೇರೆ ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಯು ತನ್ನ ಅಡಚಣೆಯ ಸಲವಾಗಿ ತಾನು ಖರೀದಿ ಮಾಡಿದ 1 ಎಕರೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನಂತರ ನಮ್ಮ ತಂದೆಯವರು 2 ಎಕರೆ ಜಮೀನನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 10.12.2012 ರಂದು ನಮ್ಮ ತಂದೆಯವರು ನಿಜಾಮುದ್ದೀನ್ ರವರಿಗೆ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿಜಾಮುದ್ದೀನ್ ರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದು ನಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆಯವರು ನಮ್ಮ ಮದುವೆಗೋಸ್ಕರ ಮತ್ತು ನಮ್ಮ ತಮ್ಮಂದಿಯರ ಶಿಕ್ಷಣದ ಸಲುವಾಗಿ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳು ನಮ್ಮ ಕುಟುಂಬಕ್ಕೆ

ಇರುವುದಿಲ್ಲ.  ದಿನಾಂಕಃ 12.05.2010 ರಂದು ನಮ್ಮ ತಮ್ಮಂದಿರು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 4 ರಿಂದ 7 ನೇ ವಾದಿಯರು ನನ್ನ ತಮ್ಮಂದಿಯರು ಆಗಬೇಕು ಎಂದರೆ ಸರಿ. 4 ರಿಂದ 7 ನೇ ವಾದಿಯರು ನಮ್ಮ ಅಕ್ಕಂದಿಯರ ಮದುವೆಗೆ ಮತ್ತು ನಮ್ಮ ಶಿಕ್ಷಣಕ್ಕೆ ಮತ್ತು ಸಾಲವನ್ನು ಮರುಪಾವತಿಸಲು ಮತ್ತು ಮಾರಾಟ ಮಾಡಲು ನಮ್ಮದು ಯಾವುದೇ ರೀತಿಯ ತಕರಾರು ಇರುವುದಿಲ್ಲ ಎಂದು ಅವರು ಒಪ್ಪಿ ಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ.

1 ಎಕರೆ ಜಮೀನನ್ನು ನಿಜಾಮುದ್ದೀನ್ ಗೆ ಮಾರಾಟ ಮಾಡಿದ ಖರೀದಿ ಪತ್ರದಲ್ಲಿ ನನ್ನ ಅಕ್ಕಳಾದ ಶಾರದಮ್ಮ, ರಾಜಪ್ಪ, ಸುರೇಶ್, ರಮೇಶ ಮತ್ತು ಬಸವರಾಜ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನಿಜಾಮುದ್ದೀನ್ ಖರೀದಿ ಪತ್ರದ ಮೇಲೆ ಇರುವ  ನಮ್ಮ ತಮ್ಮಂದಿಯರ ಸಹಿಯನ್ನು ನಾನು ಗುರುತು ಹಿಡಿಯಲು ಆಗುವುದಿಲ್ಲ ಎಂದು ಹೇಳುತ್ತಾರೆ. ಖರೀದಿ ಪತ್ರದ ಮೇಲೆ ಮಾಡಿದ ಸಹಿಗಳನ್ನು ಒಪ್ಪಿಕೊಂಡರೆ ಈ ಪ್ರಸ್ತುತ ದಾವೆಯು ನನ್ನ ವಿರುದ್ಧ ಆಗುತ್ತದೆ ಎಂದು ತಿಳಿದುಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

1 ಮತ್ತು2 ನೇ ಪ್ರತಿವಾದಿಯರು ಬೇರೆಯಾವರ ಜಮೀನಗಳಲ್ಲಿ ಕೂಲಿಗೆ ಕರೆದ್ದಾರೆ ಅವರು ಹೋಗುತ್ತಿದ್ದಾರು ಎಂದು ಹೇಳುತ್ತಾರೆ. ಈ ರೀತಿಯಾಗಿ 1 ಮತ್ತು2 ನೇಪ್ರತಿವಾದಿಯರು ಕೂಲಿಮಾಡಿತ್ತಿದ್ದರು ಎಂದು ದಾವೆಯಲ್ಲಿ ಬರೆದಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಬೇರೆ ಇರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ